ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ 2015-16ನೇ ಸಾಲಿನಲ್ಲಿ 2014-15ನೇ ಸಾಲಿಗೆ ಸಂಬಂಧಿಸಿದಂತೆ **SC Category** ರಡಿ ಕೇಂದ್ರ ಸಹಾಯಧನ ಬಿಡುಗಡೆ ಕುರಿತು

ಓದಲಾಗಿದೆ ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: **5-40/2014-BG** ದಿನಾಂಕ **02.03.2015**

## ಪ್ರಸ್ತಾವನೆ :

ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, 2015-16ನೇ ಸಾಲಿನ ರಾಜ್ಯ ಆಯವ್ಯಯದಡಿ ರೂ.1256.00 ಲಕ್ಷಗಳನ್ನು ಕೇಂದ್ರ ಹಾಗೂ ರಾಜ್ಯ ಪಾಲಿನಡಿ ಒದಗಿಸಿದೆ.

ಮೇಲೆ ಓದಲಾದಂತೆ, ಕೇಂದ್ರ ಸರ್ಕಾರವು 2014-15ನೇ ಸಾಲಿಗೆ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ **SC Category** ರಡಿ ಮೊದಲನೇ ಕಂತಾಗಿ ರೂ.27.50 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಸದರಿ ಅನುದಾನವನ್ನು 2014-15ನೇ ಸಾಲಿನ **SC Category** ರಡಿ ಅಳವಡಿಸಲಾದ ಜೈವಾನಿಲ ಸ್ಥಾವರಗಳ ಬಾಕಿ ಕೇಂದ್ರ ಸಹಾಯಧನ ಪಾವತಿಗಾಗಿ **ಬಾಗಲಕೋಟೆ, ಬೆಂಗಳೂರು(ಗ್ರಾ), ಬೆಂಗಳೂರು (ನಗರ), ಬೆಳಗಾಂ, ಬೀದರ್, ಬಿಜಾಪುರ, ಚಾಮರಾಜನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಹಾಸನ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು, ಉಡುಪಿ ಮತ್ತು ಉತ್ತರ ಕನ್ನಡ** ಜಿಲ್ಲಾ ಪಂಚಾಯತಿಗಳಿಗೆ 2015-16ನೇ ಸಾಲಿನ ಆಯವ್ಯಯದ **ಲೆಕ್ಕ ಶೀರ್ಷಿಕೆ 2810-60-196-6-01(ಯೋಜನೆ)**ರಡಿ ಒದಗಿಸಲಾದ ಅನುದಾನದಲ್ಲಿ ಕೇಂದ್ರ ಸಹಾಯಧನ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ/51/ಜೈಅಯೋ/2015 ಬೆಂಗಳೂರು, ದಿನಾಂಕ 06.08..2015**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, **2015-16**ನೇ ಸಾಲಿನಲ್ಲಿ **2014-15**ನೇ ಸಾಲಿನಲ್ಲಿ SC Category ರಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಕೇಂದ್ರ ಸಹಾಯಧನ ರೂ.27.50ಲಕ್ಷ (ಇಪ್ಪತ್ತೇಳು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ)ಗಳನ್ನು **ಲೆಕ್ಕ ಶೀರ್ಷಿಕೆ 2810-60-196-6-01(ಯೋಜನೆ)**ರಡಿ ಅನುಬಂಧದಲ್ಲಿ ಹಂಚಿಕೆ ಮಾಡಿದಂತೆ ಬಿಡುಗಡೆ ಮಾಡಿ ಆದೇಶಿಸಿದೆ.

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟಿದ್ದು, ಕಾರ್ಯಕ್ರಮದ ಮಾರ್ಗಸೂಚಿಗಳನ್ವಯ ಉದ್ದೇಶಿತ ಯೋಜನೆಗಳಿಗಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಮಾರ್ಗಪಲ್ಲಟ ಮಾಡಬಾರದು. ಹಾಗೂ **"ಗಾಂಧಿ ಸಾಕ್ಷಿ ಕಾಯಕ"** ತತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಬೇಕು ಎಂಬ ಷರತ್ತಿಗೊಳಪಟ್ಟು ಈ ಅನುದಾನ ಬಿಡುಗಡೆ ಮಾಡಿದೆ.

ಸದರಿ ಅನುದಾನವನ್ನು **ಲೆಕ್ಕ ಶೀರ್ಷಿಕೆ 2810-60-196-6-01(ಯೋಜನೆ)**ರಡಿ ವೆಚ್ಚ ಭರಿಸಿ, ಈ ಅನುದಾನ ಬಳಕೆ ಮಾಡಿಕೊಂಡಿರುವ ಫಲಾನುಭವಿಗಳ ವಿವರಗಳನ್ನು ಹಾಗೂ ನಿಗದಿತ ನಮೂನೆಗಳಲ್ಲಿ ಸಿ.ಎರವರಿಂದ ಆಡಿಟ್ ಮಾಡಿಸಿ ಹಣಬಳಕೆ ಪ್ರಮಾಣ ಪತ್ರವನ್ನು ನೀಡುವುದು.

ಈ ಆದೇಶವನ್ನು ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ : ಗ್ರಾಅಪ/424 /ಪಿಬಿಎಸ್/2015 ದಿನಾಂಕ 31.07 2015 ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಂಗಳೂರು(ಗ್ರಾ), ಬೆಂಗಳೂರು (ನಗರ), ಬೆಳಗಾಂ, ಬೀದರ್, ಬಿಜಾಪುರ, ಚಾಮರಾಜನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ
3. ಉಪಕಾರ್ಯದರ್ಶಿ (ಅಭಿವೃದ್ಧಿ) / ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಂಗಳೂರು(ಗ್ರಾ), ಬೆಂಗಳೂರು (ನಗರ), ಬೆಳಗಾಂ, ಬೀದರ್, ಬಿಜಾಪುರ, ಚಾಮರಾಜನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ
4. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
5. ಜಿಲ್ಲಾ ಖಜಾನಾಧಿಕಾರಿಗಳು, ಬಾಗಲಕೋಟೆ, ಬೆಂಗಳೂರು(ಗ್ರಾ), ಬೆಂಗಳೂರು (ನಗರ), ಬೆಳಗಾಂ, ಬೀದರ್, ಬಿಜಾಪುರ, ಚಾಮರಾಜನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ
6. ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
7. ಖಜಾನೆಗಳ ನಿರ್ದೇಶಕರು, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು.
8. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ.49, ಸೆಕೆಂಡ್ ಬ್ಲಾಕ್, ಸೆಕೆಂಡ್ ಫ್ಲೋರ್, ಖನಿಜ ಭವನ, ಸೌತ್ ಎಂಟ್ರೆನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
9. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.

## ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 51 ಜೈಅಯೋ 2015,
## ದಿನಾಂಕ 06.8.2015ಕ್ಕೆ ಅನುಬಂಧ

**2015-16ನೇ ಸಾಲಿನಲ್ಲಿ 2014-15ನೇ ಸಾಲಿಗೆ ಸಂಬಂಧಿಸಿದಂತೆ NBMMP ಯೋಜನೆಯ SC Cetegoryರಡಿ ಕೇಂದ್ರ ಸಹಾಯಧನ ಬಿಡುಗಡೆ**

| ಕ್ರ.ಸಂ | ಜಿಲ್ಲಾ ಪಂಚಾಯತ್ | ಬಿಡುಗಡೆ ಮಾಡಿದ ಕೇಂದ್ರ ಸಹಾಯಧನ ( ರೂ.ಲಕ್ಷಗಳಲ್ಲಿ) |
|---|---|---|
| 1 | 2 | 3 |
| 1 | ಬಾಗಲಕೋಟೆ | 1.46 |
| 2 | ಬೆಂಗಳೂರು (ಗ್ರಾ) | 0.29 |
| 3 | ಬೆಂಗಳೂರು (ನ) | 0.29 |
| 4 | ಬೆಳಗಾಂ | 10.76 |
| 5 | ಬೀದರ್ | 1.07 |
| 6 | ಬಿಜಾಪುರ | 0.29 |
| 7 | ಚಾಮರಾಜನಗರ | 0.58 |
| 8 | ಚಿಕ್ಕಮಗಳೂರು | 0.68 |
| 9 | ಚಿಕ್ಕಬಳ್ಳಾಪುರ | 1.36 |
| 10 | ದಕ್ಷಿಣ ಕನ್ನಡ | 0.87 |
| 11 | ಹಾಸನ | 1.16 |
| 12 | ಕೋಲಾರ | 0.19 |
| 13 | ಮಂಡ್ಯ | 0.39 |
| 14 | ಮೈಸೂರು | 1.55 |
| 15 | ರಾಮನಗರ | 1.07 |
| 16 | ತುಮಕೂರು | 0.10 |
| 17 | ಉಡುಪಿ | 5.00 |
| 18 | ಉತ್ತರ ಕನ್ನಡ | 0.39 |
| | ಒಟ್ಟು | 27.50 |

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಕುಸಾ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.